ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:04.07.2012

## ಸುತ್ತೋಲೆ

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತ ಅನುಷ್ಠಾನ ಕುರಿತು ಮಾರ್ಗಸೂಚಿ.

ಉಲ್ಲೇಖ: **ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:29:ಸುಗ್ರಾಯೋ:2012, ದಿ:29.06.2012**

****

ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದ ಯೋಜನೆಯು ದಿ:29.06.2012ರಿಂದ ಜಾರಿಗೆ ಬಂದಿರುತ್ತವೆ. ಈಗಾಗಲೇ ಸರ್ಕಾರಿ ಆದೇಶದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ ಅನುಷ್ಠಾನ ಕುರಿತು ರಚಿಸಲಾದ ಮಾರ್ಗಸೂಚಿ ಮತ್ತು ಸರ್ಕಾರಿ ಸುತ್ತೋಲೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಇತರೆ ಅಭಿವೃದ್ಧಿ ಇಲಾಖೆಗಳ Convergence ಹೊರತುಪಡಿಸಿ ಅನುಷ್ಠಾನಗೊಳಿಸಲು ತಿಳಿಸಲಾಗಿದೆ ಹಾಗೂ ಈ ಕೆಳಕಂಡ ನಿಬಂಧನೆಗೊಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸುವುದು.

ನಿಬಂಧನೆಗಳು:

1. ಸುವರ್ಣ ಗ್ರಾಮೋದಯ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಸರ್ಕಾರಿ ಆದೇಶದ ನಿಬಂಧನೆಗೊಳಪಟ್ಟು ಸರಕು, ಕಾಮಗಾರಿ ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಸಂಬಂಧಿತ ನಿಯಮಗಳನ್ನು ಪಾಲಿಸಬೇಕು. ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್., (KRIDL) ನಿಗಮಕ್ಕೆ ಇದರಿಂದ ವಿನಾಯಿತಿ ಇದೆ.

2. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ 2001ರ ಜನಸಂಖ್ಯೆಯನ್ನಾಧರಿಸಿ ತಾಲ್ಲೂಕುವಾರು ಆಯ್ಕೆ ಮಾಡಬೇಕಾದ ಸಂಭಾವ್ಯ ಗ್ರಾಮಗಳ ಸಂಖ್ಯೆ, ತಾಲ್ಲೂಕಿಗೆ ನಿಗಧಿಪಡಿಸಿದ ಗ್ರಾಮೀಣ ಜನಸಂಖ್ಯೆ, ಹಾಗೂ ತಾಲ್ಲೂಕುಗಳಿಗೆ ನಿಗಧಿಪಡಿಸಿದ ಅನುದಾನದ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ರೂ.1000.00 ಕೋಟಿ ಅನುದಾನದಲ್ಲಿ ತಲಾನುದಾನ ರೂ.2500/- ರಂತೆ ಒಟ್ಟು 40,00,000 (ನಲವತ್ತು ಲಕ್ಷ) ಗ್ರಾಮೀಣ ಜನಸಂಖ್ಯೆಯ 1000 ಗ್ರಾಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯ್ಕೆ ಮಾಡಲಾಗುವುದು. ಇದರಂತೆ 1000 ಗ್ರಾಮಗಳಿಗೆ ನಿಗದಿಪಡಿಸಿರುವ ಜನಸಂಖ್ಯೆ 40,00,000 ಹಾಗೂ ರಾಜ್ಯದ ಮತ್ತು ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ತಾಲ್ಲೂಕಿನ ಜನಸಂಖ್ಯೆ ಮತ್ತು ರೂ.2500/- ತಲಾನುದಾನದಂತೆ ತಾಲ್ಲೂಕಿನ ಅನುದಾನವನ್ನು ನಿಗಧಿಪಡಿಸಲಾಗಿದೆ.

3. ತಾಲ್ಲೂಕಿನಲ್ಲಿ ಒಂದಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳು ಒಳಗೊಂಡಿದ್ದಲ್ಲಿ ಸದರಿ ಕ್ಷೇತ್ರಗಳ ಗ್ರಾಮೀಣ ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಪ್ರತಿಯೊಂದು ಕ್ಷೇತ್ರದಲ್ಲೂ ಗ್ರಾಮಗಳನ್ನು ಗುರುತಿಸಿ ತಾಲ್ಲೂಕುವಾರು ಗ್ರಾಮಗಳನ್ನು ಆಯ್ಕೆ ಮಾಡಬೇಕಾಗುತ್ತದೆ.

4. ಆಯ್ಕೆಯಾದ ಗ್ರಾಮಗಳ ಗ್ರಾಮಾಂತರ ಪ್ರದೇಶದ ಜನಸಂಖ್ಯೆ ಮತ್ತು ತಾಲ್ಲೂಕುಗಳಿಗೆ ನಿಗದಿಯಾದ ಅನುದಾನದಲ್ಲಿ ತಲಾನುದಾನ ಹಂಚಿಕೆಯನ್ನು ನಿಗದಿಪಡಿಸಿ ಆಯಾ ಗ್ರಾಮದ 2001ರ ಜನಗಣತಿಯ ಜನಸಂಖ್ಯೆಯಂತೆ ಗ್ರಾಮಗಳ ಅನುದಾನ ಹಂಚಿಕೆಯಾಗುತ್ತದೆ. ಹಾಗೂ ಗ್ರಾಮಗಳನ್ನು ಆಯ್ಕೆ ಅಂತಿಮ ಪಟ್ಟಿ ತಯಾರಿಸುವಾಗ ಸರ್ಕಾರದ ಪತ್ರದ ಸಂಖ್ಯೆ:ಗ್ರಾಅಪ:101:ಸುಗ್ರಾಯೋ:2008 ದಿ:20.01.2009ರಂತೆ ಕ್ರಮ ವಹಿಸುವುದು.

5. ತಾಲ್ಲೂಕುಗಳಿಗೆ ನಿಗಧಿಪಡಿಸಿದ ಗ್ರಾಮೀಣ ಜನಸಂಖ್ಯೆ ಮಿತಿಯೊಳಗೆ ಸ್ಥಳೀಯ ಚುನಾಯಿತ ಶಾಸಕರ ಶಿಫಾರಸ್ಸಿನೊಂದಿಗೆ ಪ್ರತಿಯೊಂದು ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮಗಳನ್ನು ಗುರುತಿಸಿ, ಆಯ್ಕೆ ಪಟ್ಟಿ ಅಂತಿಮಗೊಳಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಸರ್ಕಾರಕ್ಕೆ ಸಲ್ಲಿಸುವುದು. ಯಾವುದೇ ಕಾರಣಕ್ಕೂ ತಾಲ್ಲೂಕಿಗೆ ನಿಗಧಿಪಡಿಸಿದ ಗ್ರಾಮೀಣ ಜನಸಂಖ್ಯೆಯನ್ನು ಮೀರಿ ಗ್ರಾಮಗಳನ್ನು ಆಯ್ಕೆ ಮಾಡುವಂತಿಲ್ಲ.

6. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಿಗೆ ಹಂಚಿಕೆಯಾದ ಅನುದಾನದಲ್ಲಿ ಶೇ.70 ರಸ್ತೆ ಮತ್ತು ಚರಂಡಿಗೆ, ಶೇ.3 ಘನ ತ್ಯಾಜ್ಯವಸ್ತು ವಿಲೇವಾರಿಗೆ, ಶೇ.2 ಸೋಲಾರ್ ಬೀದಿ ದೀಪ ಅಳವಡಿಸಲು ಹಾಗೂ ಶೇ.10 ಒಂದು ಅಂಗನವಾಡಿ ಕಟ್ಟಡಕ್ಕೆ ಉಳಿದ ಶೇ.15ರಷ್ಟು ಅನುದಾನದಲ್ಲಿ ಆದ್ಯತೆ ಹಾಗೂ ಅವಶ್ಯಕತೆ ಮೇರೆಗೆ ಶಾಲಾ ಕಟ್ಟಡಕ್ಕೆ, ಗ್ರಾಮ ಪಂಚಾಯತಿ ಕಟ್ಟಡಕ್ಕೆ, ಗ್ರಂಥಾಲಯ ಕಟ್ಟಡಕ್ಕೆ, ಮಹಿಳಾ ಎಸ್‌ಹೆಚ್‌ಜಿಗಳ ವರ್ಕ್‌ಶೆಡ್, ಬಯಲು ರಂಗಮಂದಿರ ಮತ್ತು ಕೊನೆಯ ಆದ್ಯತೆ ಮೇರೆಗೆ ಸಮುದಾಯ ಭವನ, ಐ.ಇ.ಸಿ ಚಟುವಟಿಕೆಗೆ ವಿನಿಯೋಗಿಸುವುದು.

7. ಗ್ರಾಮಾಭಿವೃದ್ಧಿ ಯೋಜನೆ ತಯಾರಿಸುವ NGOಗಳನ್ನು ಆಯ್ಕೆ ಮಾಡುವಾಗ ಪಾರದರ್ಶಕ ನಿಯಮಗಳನ್ವಯ ಅವುಗಳು ಈ ಹಿಂದೆ ಕಾರ್ಯನಿರ್ವಹಿಸುವ ಹಿನ್ನೆಲೆ, ನೈಪುಣ್ಯತೆ ಹಾಗೂ ಅವುಗಳು ಹೊಂದಿರುವ ಸೌಲಭ್ಯಗಳನ್ನು ಪರಿಗಣಿಸಬೇಕು.

8. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಗ್ರಾಮಗಳಿಗೆ ಅವಶ್ಯಕತೆಯಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಗ್ರಾಮದ ಜನರನ್ನು ಪಾಲ್ಗೊಳ್ಳುವಂತೆ ಮಾಡಿ ಅವರ ಸಮ್ಮುಖದಲ್ಲಿ ಯೋಜನೆಯನ್ನು ತಯಾರಿಸುವುದು. ಯೋಜನೆಯು ಗ್ರಾಮದ ಮೂಲಭೂತ ಅಗತ್ಯಗಳನ್ನು ಪೂರೈಸುವಂತಿರಬೇಕು ಮತ್ತು ಸ್ಥಳೀಯ ಚುನಾಯಿತ ವಿಧಾನಸಭಾ ಸದಸ್ಯರುಗಳ ಸಮಾಲೋಚನೆಯೊಂದಿಗೆ ಗ್ರಾಮಾಭಿವೃದ್ಧಿ ಯೋಜನೆಯನ್ನು ಸುತ್ತೋಲೆ ಸಂಖ್ಯೆ ಗ್ರಾಅಪ:243:ಯೊಉಮಾ:2006, ದಿನಾಂಕ: 11.12.2006ರನ್ವಯ ಅಂತಿಮಗೊಳಿಸಬೇಕು. ಅಂತಿಮಗೊಳಿಸಿದ ಗ್ರಾಮಾಭಿವೃದ್ಧಿ ಯೋಜನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಂತ್ರಿಕ ಪರಿಶೀಲನೆಯೊಂದಿಗೆ ಅನುಮೋದನೆ ನೀಡುವುದು. ಸರ್ಕಾರದ ಪರಿಶೀಲನೆಗಾಗಿ ಪ್ರತಿ ತಾಲ್ಲೂಕಿನಿಂದ --2 ಅನುಮೋದನೆಗೊಂಡ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಸಲ್ಲಿಸುವುದು.

9. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಅಡಕಮಾಡಲಾಗುವ ಕಾಮಗಾರಿಗಳನ್ನು ಸ್ಥಳ ಲಭ್ಯತೆ ಮತ್ತು ಅವಶ್ಯಕತೆಯ ಆಧಾರದ ಮೇಲೆ ಸೇರಿಸತಕ್ಕದ್ದು. ಒಂದು ಸಲ ಯಾವುದೇ ಕಾಮಗಾರಿಗಳನ್ನು ಅಡಕ ಮಾಡಿದಲ್ಲಿ ಅವುಗಳನ್ನು ಬದಲಾವಣೆ ಮಾಡತಕ್ಕದ್ದಲ್ಲ.

10. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಪಡಿಸಲು ಆಯ್ಕೆ ಮಾಡಿರುವ ರಸ್ತೆ, ಚರಂಡಿ ಮತ್ತು ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಕ್ರೋಡೀಕರಿಸಿ ಒಂದೇ ಅಂದಾಜು ಪಟ್ಟಿಯನ್ನು ತಯಾರಿಸಿ, ಕಾಮಗಾರಿಗಳ ಅಂದಾಜು ಮೊತ್ತವನ್ನು ಗಣನೆಗೆ ತೆಗೆದುಕೊಳ್ಳದೆ ಕಾರ್ಯಪಾಲಕ ಅಭಿಯಂತರರ ಹಂತದಲ್ಲಿಯೇ ತಾಂತ್ರಿಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಟ್ಟದಲ್ಲಿಯೇ ಆಡಳಿತಾತ್ಮಕ ಅನುಮೋದನೆ ನೀಡುವುದು.

11. ಸುವರ್ಣ ಗ್ರಾಮೋದಯ ಯೋಜನೆಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಸದರಿ ಜನಾಂಗದವರು ವಾಸಿಸುವ ಪ್ರದೇಶಗಳಲ್ಲೇ ಅಭಿವೃದ್ಧಿಗೆ ಕಡ್ಡಾಯವಾಗಿ ಭರಿಸತಕ್ಕದ್ದು.

12. ಸುವರ್ಣ ಗ್ರಾಮೋದಯ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೆಳಗೆ ಇರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳನ್ನು ಸಮಗ್ರಗೊಳಿಸತಕ್ಕದ್ದು(Convergence) ವಿಶೇಷವಾಗಿ

- TSC ಕಾರ್ಯಕ್ರಮಗಳಡಿ ಗ್ರಾಮದ ಸ್ವಚ್ಛತೆ ಹಾಗೂ ನೈರ್ಮಲ್ಯದ ಬಗ್ಗೆ ಆಗುವ ದುಷ್ಪರಿಣಾಮದ ಅರಿವು ಮೂಡಿಸಿ ತಿಪ್ಪೆಗುಂಡಿ ಸ್ಥಳಾಂತರಿಸಲು ಮತ್ತು ಶೌಚಾಲಯಗಳನ್ನು ನಿರ್ಮಿಸಲು ಕ್ರಮ ವಹಿಸುವುದು.
- ನಿರುದ್ಯೋಗಿ ಯುವಕ/ಯುವತಿಯರನ್ನು ಸ್ವಸಹಾಯ ಸಂಘಗಳಲ್ಲಿ ತೊಡಗಿಸಿ SGSY/ NRLM ಯೋಜನೆಯಡಿ ಸ್ಥಳೀಯವಾಗಿ ಬೇಡಿಕೆ ಇರುವ ತರಬೇತಿ ನೀಡಿ ಉದ್ಯೋಗವನ್ನು ಒದಗಿಸಿಕೊಡುವುದು.
- MGNREGA ಯೋಜನೆಯಡಿ ಕೂಲಿಯಾಧಾರಿತ ಉದ್ಯೋಗ ಸೃಜಿಸಿ ಗ್ರಾಮೀಣ ಜನರ ಜೀವನಕ್ಕೆ ಭದ್ರತೆ ಒದಗಿಸಿ, ಜಲಸಂರಕ್ಷಣೆ ಮತ್ತು ಅರಣ್ಯೀಕರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. MGNREGA ಯೋಜನೆಯ ನಿಯಮಗಳು, ಮಾರ್ಗಸೂಚಿಗಳು, ಸುತ್ತೋಲೆಗಳನ್ವಯ ಗ್ರಾಮದೊಳಗಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಮತಿಸಬಹುದಾದ ಹಾಗೂ ಅವಕಾಶ ಕಲ್ಪಿಸಿರುವ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದು.

13. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿಗಳನ್ನು ನಿರ್ಮಾಣ ಮಾಡುವಾಗ ಗ್ರಾಮದೊಳಗಿನ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡತಕ್ಕದ್ದು. ಉಪಯೋಗಿಸದಂತಹ ನೀರು ಒಂದೆಡೆ ಶೇಖರವಾಗಿ ಅನೈರ್ಮಲ್ಯ ವಾತಾವರಣ ಉಂಟು ಮಾಡುವಂತೆ ರಸ್ತೆ ಮತ್ತು ಚರಂಡಿಗಳನ್ನು ನಿರ್ಮಾಣ ಮಾಡತಕ್ಕದಲ್ಲ.

14. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ಪೈಕಿ ನೆರೆ ಹಾವಳಿಯಿಂದ ಸ್ಥಳಾಂತರಗೊಳಿಸಬೇಕಾದ ಗ್ರಾಮಗಳಲ್ಲಿ ಸದರಿ ಯೋಜನೆಯಡಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಕೂಡದು.

15. ಸುವರ್ಣ ಗ್ರಾಮೋದಯ ಯೋಜನೆಯ ಪ್ರತಿ ಮಾಹೆಯ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವನ್ನು ಸ್ಥಳೀಯ ಚುನಾಯಿತ ವಿಧಾನಸಭಾ ಸದಸ್ಯರುಗಳಿಗೆ ಒದಗಿಸುವುದು. ಹಾಗೂ ಪ್ರತಿ ಗ್ರಾಮವಾರು/ತಾಲ್ಲೂಕುವಾರು ಕ್ರೋಢೀಕೃತ ಪ್ರಗತಿ ವರದಿಯನ್ನು ನಿಗದಿತ ನಮೂನೆಯಲ್ಲಿ ಮಾಹೆವಾರು ಸರ್ಕಾರಕ್ಕೆ ಸಲ್ಲಿಸುವುದು.

16. ಸುವರ್ಣ ಗ್ರಾಮೋದಯ ಯೋಜನೆಯ ಪ್ರಗತಿಯನ್ನು ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ನಡೆಸುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪರಾಮರ್ಶೆ ಮಾಡುವುದು ಮತ್ತು ಅಭಿವೃದ್ಧಿಗೆ ಕ್ರಮ ಜರುಗಿಸುವುದು.

17. ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ದರ್ಜೆಯ ಒಬ್ಬ ಅಧಿಕಾರಿಯನ್ನು ಸುವರ್ಣ ಗ್ರಾಮೋದಯ ಯೋಜನೆಯ ಜಿಲ್ಲಾ ಯೋಜನಾ ಅಧಿಕಾರಿಯನ್ನಾಗಿ ಹಾಗೂ ತಾಲ್ಲೂಕಿನ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸುವರ್ಣ ಗ್ರಾಮೋದಯ ಯೋಜನೆಯ ತಾಲ್ಲೂಕು ಯೋಜನಾ ಅಧಿಕಾರಿಯಾಗಿ ಅವರ ಹೀಗಿರುವ ಜವಾಬ್ದಾರಿಯೊಂದಿಗೆ ನೇಮಿಸುವುದು ಹಾಗೂ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.

18. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಅನುಬಂಧ-2ರಲ್ಲಿ ಲಗತ್ತಿಸಿರುವ ವೇಳಾಪಟ್ಟಿಯಂತೆ ಯೋಜನೆಯ ಕಾರ್ಯ ಚಟುವಟಿಕೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.

(ಡಾ:ಶಾಲಿನಿ ರಜನೀಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಚಿನ್ನಸ್ವಾಮಿ ಕ್ರೀಡಾಂಗಣ ಆವರಣ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಕಟ್ಟಡ, ಬೆಂಗಳೂರು-20.

ಅನುಬಂಧ - 1

| ಸುವರ್ಣ ಗ್ರಾಮೋದಯ ಯೋಜನೆಯಡಿ 5ನೇ ಹಂತಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಜನಸಂಖ್ಯೆ | | | | | |
|---|---|---|---|---|---|
| ಕ್ರ.ಸಂ | ಜಿಲ್ಲೆ/ತಾಲ್ಲೂಕು | 2001ರ ಜನಗಣತಿ ಪ್ರಕಾರ ಗ್ರಾಮೀಣಜನಸಂಖ್ಯೆ | ನಿಗದಿಪಡಿಸಿದ ಗ್ರಾಮೀಣ ಜನಸಂಖ್ಯೆ | ನಿಗದಿಪಡಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಸಂಭವನೀಯ ಆಯ್ಕೆ ಮಾಡಬೇಕಾದ ಗ್ರಾಮಗಳ ಸಂಖ್ಯೆ |
| 1 | ಬೆಂಗಳೂರು (ನಗರ) | | | | |
| 1 | ಆನೇಕಲ್ | 241160 | 27649 | 691 | 7 |
| 2 | ಬೆಂಗಳೂರು (ಉ) | 223031 | 25570 | 639 | 6 |
| 3 | ಬೆಂಗಳೂರು (ದ) | 166428 | 19081 | 477 | 5 |
| 4 | ಬೆಂಗಳೂರು(ಪೂ) | 146518 | 16798 | 420 | 4 |
| | ಒಟ್ಟು | 777137 | 89098 | 2227 | 22 |
| 2 | ಬೆಂಗಳೂರು (ಗ್ರಾ) | | | | |
| 1 | ದೇವನಹಳ್ಳಿ | 132380 | 15177 | 379 | 4 |
| 2 | ದೊಡ್ಡಬಳ್ಳಾಪುರ | 190554 | 21847 | 546 | 6 |
| 3 | ಹೊಸಕೋಟೆ | 186107 | 21337 | 533 | 5 |
| 4 | ನೆಲಮಂಗಲ | 149593 | 17151 | 429 | 4 |
| | ಒಟ್ಟು | 658634 | 75512 | 1887 | 19 |
| 3 | ರಾಮನಗರ | | | | |
| 1 | ಚನ್ನಪಟ್ಟಣ | 188997 | 21668 | 542 | 5 |
| 2 | ಕನಕಪುರ | 290148 | 33265 | 831 | 8 |
| 3 | ರಾಮನಗರ | 158953 | 18224 | 456 | 5 |
| 4 | ಮಾಗಡಿ | 177386 | 20337 | 508 | 5 |
| | ಒಟ್ಟು | 815484 | 93494 | 2337 | 23 |
| 4 | ತುಮಕೂರು | | | | |
| 1 | ಚಿಕ್ಕನಾಯಕನಹಳ್ಳಿ | 187233 | 21466 | 537 | 5 |
| 2 | ಗುಬ್ಬಿ | 239608 | 27471 | 687 | 7 |
| 3 | ಕೊರಟಗೇರೆ | 147297 | 16887 | 422 | 4 |
| 4 | ಕುಣಿಗಲ್ | 205687 | 23582 | 590 | 6 |
| 5 | ಮಧುಗಿರಿ | 239580 | 27468 | 687 | 7 |
| 6 | ಪಾವಗಡ | 218187 | 25015 | 625 | 6 |
| 7 | ಶಿರಾ | 251385 | 28821 | 721 | 7 |
| 8 | ತಿಪಟೂರು | 164020 | 18805 | 470 | 5 |
| 9 | ತುಮಕೂರು | 267732 | 30695 | 767 | 8 |
| 10 | ತುರವೇಕೆರೆ | 156780 | 17975 | 449 | 4 |
| | ಒಟ್ಟು | 2077509 | 238185 | 5955 | 59 |

| | | | | | |
|---|---|---|---|---|---|
| 5 | ಕೋಲಾರ | | | | |
| 1 | ಬಂಗಾರಪೇಟೆ | 225650 | 25871 | 647 | 6 |
| 2 | ಕೋಲಾರ | 228686 | 26219 | 655 | 7 |
| 3 | ಮಾಲೂರು | 179194 | 20544 | 514 | 5 |
| 4 | ಮುಳಬಾಗಿಲು | 187269 | 21470 | 537 | 5 |
| 5 | ಶ್ರೀನಿವಾಸಪುರ | 161762 | 18546 | 464 | 5 |
| | ಒಟ್ಟು | 982561 | 112650 | 2817 | 28 |
| 6 | ಚಿಕ್ಕಬಳ್ಳಾಪುರ | | | | |
| 1 | ಬಾಗೇಪಲ್ಲಿ | 149570 | 17148 | 429 | 4 |
| 2 | ಚಿಕ್ಕಬಳ್ಳಾಪುರ | 136154 | 15610 | 390 | 4 |
| 3 | ಚಿಂತಾಮಣಿ | 205791 | 23594 | 590 | 6 |
| 4 | ಗುಡಿಬಂಡೆ | 43021 | 4932 | 123 | 1 |
| 5 | ಶಿಡ್ಲಘಟ್ಟ | 152867 | 17526 | 438 | 4 |
| 6 | ಗೌರಿಬಿದನೂರು | 240582 | 27583 | 690 | 7 |
| | ಒಟ್ಟು | 927985 | 106393 | 2660 | 26 |
| 7 | ಚಿತ್ರದುರ್ಗ | | | | |
| 1 | ಚಳ್ಳಕೆರೆ | 283651 | 32520 | 813 | 8 |
| 2 | ಚಿತ್ರದುರ್ಗ | 251336 | 28815 | 720 | 7 |
| 3 | ಹಿರಿಯೂರು | 215913 | 24754 | 619 | 6 |
| 4 | ಹೊಳಲ್ಕೆರೆ | 183192 | 21003 | 525 | 6 |
| 5 | ಹೊಸದುರ್ಗ | 196957 | 22581 | 565 | 6 |
| 6 | ಮೊಳಕಾಲ್ಮೂರು | 112609 | 12911 | 323 | 3 |
| | ಒಟ್ಟು | 1243658 | 142584 | 3565 | 36 |
| 8 | ದಾವಣಗೆರೆ | | | | |
| 1 | ಚನ್ನಗಿರಿ | 273995 | 31413 | 785 | 8 |
| 2 | ದಾವಣಗೆರೆ | 238000 | 27287 | 682 | 7 |
| 3 | ಹರಪ್ಪನಹಳ್ಳಿ | 226886 | 26012 | 650 | 6 |
| 4 | ಹರಿಹರ | 157910 | 18104 | 453 | 5 |
| 5 | ಹೊನ್ನಳ್ಳಿ | 207024 | 23735 | 593 | 6 |
| 6 | ಜಗಳೂರು | 144139 | 16525 | 413 | 4 |
| | ಒಟ್ಟು | 1247954 | 143076 | 3576 | 36 |
| 9 | ಶಿವಮೊಗ್ಗ | | | | |
| 1 | ಭದ್ರಾವತಿ | 178327 | 20445 | 511 | 5 |
| 2 | ಹೊಸನಗರ | 109957 | 12606 | 315 | 3 |
| 3 | ಸಾಗರ | 138294 | 15855 | 396 | 4 |
| 4 | ಶಿಕಾರಿಪುರ | 167573 | 19212 | 480 | 5 |
| 5 | ಶಿವಮೊಗ್ಗ | 170840 | 19587 | 490 | 5 |
| 6 | ಸೊರಬ | 178145 | 20424 | 511 | 5 |
| 7 | ತೀರ್ಥಹಳ್ಳಿ | 128399 | 14721 | 368 | 4 |
| | ಒಟ್ಟು | 1071535 | 122850 | 3071 | 31 |

| | | | | | |
|---|---|---|---|---|---|
| 10 | ಮೈಸೂರು | | | | |
| 1 | ಹೆಚ್.ಡಿ.ಕೋಟೆ | 233885 | 26815 | 670 | 7 |
| 2 | ಹುಣಸೂರು | 210026 | 24079 | 602 | 6 |
| 3 | ಕೆ.ಆರ್.ನಗರ | 208566 | 23912 | 598 | 6 |
| 4 | ಮೈಸೂರು | 239262 | 27431 | 686 | 7 |
| 5 | ನಂಜನಗೂಡು | 311991 | 35770 | 894 | 9 |
| 6 | ಪಿರಿಯಾಪಟ್ಟಣ | 209330 | 24000 | 600 | 6 |
| 7 | ಟಿ.ನರಸೀಪುರ | 245839 | 28185 | 705 | 7 |
| | ಒಟ್ಟು | 1658899 | 190192 | 4755 | 48 |
| 11 | ಚಾಮರಾಜನಗರ | | | | |
| 1 | ಚಾಮರಾಜನಗರ | 277013 | 31759 | 794 | 8 |
| 2 | ಗುಂಡ್ಲುಪೇಟೆ | 186742 | 21410 | 535 | 5 |
| 3 | ಕೊಳ್ಳೇಗಾಲ | 284231 | 32587 | 815 | 8 |
| 4 | ಯೆಳಂದೂರು | 69386 | 7955 | 199 | 2 |
| | ಒಟ್ಟು | 817372 | 93711 | 2343 | 23 |
| 12 | ಮಂಡ್ಯ | | | | |
| 1 | ಕೆ.ಆರ್.ಪೇಟೆ | 225665 | 25872 | 647 | 6 |
| 2 | ಮದ್ದೂರು | 264262 | 30297 | 757 | 8 |
| 3 | ಮಳವಳ್ಳಿ | 245958 | 28199 | 705 | 7 |
| 4 | ಮಂಡ್ಯ | 274433 | 31464 | 787 | 8 |
| 5 | ನಾಗಮಂಗಲ | 174718 | 20031 | 501 | 5 |
| 6 | ಪಾಂಡವಪುರ | 156699 | 17965 | 449 | 4 |
| 7 | ಶ್ರೀರಂಗಪಟ್ಟಣ | 139255 | 15965 | 399 | 4 |
| | ಒಟ್ಟು | 1480990 | 169793 | 4245 | 42 |
| 13 | ಹಾಸನ | | | | |
| 1 | ಆಲೂರು | 79938 | 9165 | 229 | 2 |
| 2 | ಅರ್ಕಲಗೂಡು | 184789 | 21186 | 529 | 5 |
| 3 | ಅರಸೀಕೆರೆ | 257878 | 29566 | 739 | 7 |
| 4 | ಬೇಲೂರು | 163527 | 18748 | 469 | 5 |
| 5 | ಚೆನ್ನರಾಯಪಟ್ಟಣ | 243590 | 27927 | 698 | 7 |
| 6 | ಹಾಸನ | 227885 | 26127 | 653 | 7 |
| 7 | ಹೊಳೆನರಸೀಪುರ | 148220 | 16993 | 425 | 4 |
| 8 | ಸಕಲೇಶಪುರ | 111169 | 12745 | 319 | 3 |
| | ಒಟ್ಟು | 1416996 | 162457 | 4061 | 40 |
| 14 | ಚಿಕ್ಕಮಗಳೂರು | | | | |
| 1 | ಚಿಕ್ಕಮಗಳೂರು | 194314 | 22278 | 557 | 6 |
| 2 | ಕಡೂರು | 235890 | 27045 | 676 | 7 |
| 3 | ಕೊಪ್ಪ | 82667 | 9478 | 237 | 2 |
| 4 | ಮೂಡಿಗೆರೆ | 124350 | 14257 | 356 | 3 |
| 5 | ಎನ್.ಆರ್.ಪುರ | 58175 | 6670 | 167 | 2 |
| 6 | ಶೃಂಗೇರಿ | 32681 | 3747 | 94 | 1 |
| 7 | ತರೀಕರೆ | 190104 | 21795 | 545 | 5 |
| | ಒಟ್ಟು | 918181 | 105270 | 2632 | 26 |

| | | | | | |
|---|---|---|---|---|---|
| 15 | ಕೊಡಗು | | | | |
| 1 | ಮಡಿಕೇರಿ | 109516 | 12556 | 314 | 3 |
| 2 | ಸೋಮವಾರಪೇಟೆ | 185515 | 21269 | 532 | 6 |
| 3 | ವಿರಾಜಪೇಟ್ | 178148 | 20425 | 511 | 5 |
| | ಒಟ್ಟು | 473179 | 54250 | 1357 | 14 |
| 16 | ದಕ್ಷಿಣ ಕನ್ನಡ | | | | |
| 1 | ಬೆಳ್ತಂಗಡಿ | 239189 | 27423 | 686 | 7 |
| 2 | ಬಂಟ್ವಾಳ | 306734 | 35167 | 879 | 9 |
| 3 | ಮಂಗಳೂರು | 281777 | 32306 | 808 | 8 |
| 4 | ಪುತ್ತೂರು | 218002 | 24994 | 625 | 6 |
| 5 | ಸೂಳ್ಯ | 122726 | 14070 | 352 | 3 |
| | ಒಟ್ಟು | 1168428 | 133960 | 3350 | 33 |
| 17 | ಉಡುಪಿ | | | | |
| 1 | ಕಾರ್ಕಳ | 180482 | 20692 | 517 | 5 |
| 2 | ಕುಂದಾಪುರ | 348829 | 39993 | 1000 | 10 |
| 3 | ಉಡುಪಿ | 376579 | 43174 | 1079 | 11 |
| | ಒಟ್ಟು | 905890 | 103859 | 2596 | 26 |
| 18 | ಬಳ್ಳಾರಿ | | | | |
| 1 | ಬಳ್ಳಾರಿ | 308728 | 35395 | 885 | 9 |
| 2 | ಹೂವಿನಹಡಗಲಿ | 144704 | 16590 | 415 | 4 |
| 3 | ಹೊಸಪೇಟೆ | 153499 | 17599 | 440 | 4 |
| 4 | ಹಗರಿಬೊಮ್ಮನಹಳ್ಳಿ | 159886 | 18331 | 458 | 5 |
| 5 | ಕೂಡ್ಲಿಗಿ | 227633 | 26098 | 652 | 7 |
| 6 | ಸಂಡೂರು | 156998 | 18000 | 450 | 4 |
| 7 | ಸಿರುಗುಪ್ಪ | 168842 | 19358 | 484 | 5 |
| | ಒಟ್ಟು | 1320290 | 151371 | 3784 | 38 |
| 19 | ಕೊಪ್ಪಳ | | | | |
| 1 | ಗಂಗಾವತಿ | 304942 | 34961 | 874 | 9 |
| 2 | ಕೊಪ್ಪಳ | 249776 | 28637 | 716 | 7 |
| 3 | ಕುಷ್ಟಗಿ | 218148 | 25010 | 625 | 6 |
| 4 | ಯಲಬುರ್ಗಾ | 224931 | 25788 | 645 | 7 |
| | ಒಟ್ಟು | 997797 | 114396 | 2860 | 29 |
| 20 | ರಾಯಚೂರು | | | | |
| 1 | ದೇವದುರ್ಗ | 200463 | 22983 | 575 | 6 |
| 2 | ಲಿಂಗಸುಗೂರು | 247478 | 28373 | 709 | 7 |
| 3 | ಮಾನ್ವಿ | 293106 | 33604 | 840 | 8 |
| 4 | ರಾಯಚೂರು | 208976 | 23959 | 599 | 6 |
| 5 | ಸಿಂಧನೂರು | 298902 | 34269 | 857 | 9 |
| | ಒಟ್ಟು | 1248925 | 143188 | 3580 | 36 |

| | | | | | |
|---|---|---|---|---|---|
| 21 | ಗುಲ್ಬರ್ಗಾ | | | | |
| 1 | ಅಫ್‌ಜಲಪುರ | 160736 | 18428 | 461 | 5 |
| 2 | ಆಳಂದ | 261891 | 30026 | 751 | 8 |
| 3 | ಚಿಂಚೋಳಿ | 206502 | 23675 | 592 | 6 |
| 4 | ಚಿತ್ತಾಪುರ | 238532 | 27348 | 684 | 7 |
| 5 | ಗುಲ್ಬರ್ಗಾ | 245414 | 28137 | 703 | 7 |
| 6 | ಜೇವರ್ಗಿ | 216075 | 24773 | 619 | 6 |
| 7 | ಸೇಡಂ | 156026 | 17888 | 447 | 4 |
| | ಒಟ್ಟು | 1485176 | 170275 | 4257 | 43 |
| 22 | ಯಾದಗಿರಿ | | | | |
| 8 | ಶಹಾಪುರ್ | 249819 | 28642 | 716 | 7 |
| 9 | ಷೋರಾಪುರ | 293133 | 33607 | 840 | 9 |
| 10 | ಯಾದಗಿರಿ | 250173 | 28682 | 717 | 7 |
| | ಒಟ್ಟು | 793125 | 90931 | 2273 | 23 |
| 23 | ಬೀದರ್ | | | | |
| 1 | ಔರಾದ್ | 229490 | 26311 | 658 | 6 |
| 2 | ಬೀದರ್ | 231283 | 26516 | 663 | 7 |
| 3 | ಭಾಲ್ಕಿ | 221949 | 25446 | 636 | 6 |
| 4 | ಬಸವಕಲ್ಯಾಣ | 241125 | 27645 | 691 | 7 |
| 5 | ಹುಮನಾಬಾದ್ | 233651 | 26788 | 670 | 7 |
| | ಒಟ್ಟು | 1157498 | 132706 | 3318 | 33 |
| 24 | ಬಾಗಲಕೋಟೆ | | | | |
| 1 | ಬಾದಾಮಿ | 214869 | 24635 | 616 | 6 |
| 2 | ಬಾಗಲಕೋಟೆ | 156283 | 17918 | 448 | 5 |
| 3 | ಬೀಳಗಿ | 126542 | 14508 | 363 | 4 |
| 4 | ಹುನಗುಂದ | 217129 | 24894 | 622 | 6 |
| 5 | ಜಮಖಂಡಿ | 256694 | 29430 | 736 | 7 |
| 6 | ಮುಧೋಳ್ | 201855 | 23143 | 579 | 6 |
| | ಒಟ್ಟು | 1173372 | 134528 | 3364 | 34 |
| 25 | ಬಿಜಾಪುರ್ | | | | |
| 1 | ಬಸವನಬಾಗೇವಾಡಿ | 274730 | 31498 | 787 | 8 |
| 2 | ಬಿಜಾಪುರ | 315457 | 36167 | 904 | 9 |
| 3 | ಇಂಡಿ | 322505 | 36975 | 924 | 9 |
| 4 | ಮುದ್ದೇಬಿಹಾಳ | 199214 | 22840 | 571 | 6 |
| 5 | ಸಿಂಧಗಿ | 298923 | 34271 | 857 | 8 |
| | ಒಟ್ಟು | 1410829 | 161751 | 4043 | 40 |
| 26 | ಗದಗ | | | | |
| 1 | ಗದಗ | 158931 | 18221 | 456 | 4 |
| 2 | ಮುಂಡರಗಿ | 95946 | 11000 | 275 | 3 |
| 3 | ನರಗುಂದ | 60118 | 6892 | 172 | 2 |
| 4 | ರೋಣ | 181091 | 20762 | 519 | 5 |
| 5 | ಶಿರಹಟ್ಟಿ | 133566 | 15313 | 383 | 4 |
| | ಒಟ್ಟು | 629652 | 72188 | 1805 | 18 |

| | | | | | |
|---|---|---|---|---|---|
| 27 | ಧಾರವಾಡ್ | | | | |
| 1 | ಧಾರವಾಡ | 202671 | 23236 | 581 | 6 |
| 2 | ಹುಬ್ಬಳ್ಳಿ | 128380 | 14719 | 368 | 4 |
| 3 | ಕಲಘಟಗಿ | 122336 | 14026 | 351 | 3 |
| 4 | ಕುಂದಗೋಳ | 140213 | 16075 | 402 | 4 |
| 5 | ನವಲಗುಂದ | 128736 | 14759 | 369 | 4 |
| | ಒಟ್ಟು | 722336 | 82815 | 2071 | 21 |
| 28 | ಹಾವೇರಿ | | | | |
| 1 | ಬ್ಯಾಡಗಿ | 102281 | 11726 | 293 | 3 |
| 2 | ಹಾನಗಲ್ | 205741 | 23588 | 590 | 6 |
| 3 | ಹಾವೇರಿ | 196434 | 22521 | 563 | 6 |
| 4 | ಹಿರೇಕೆರೂರು | 196586 | 22538 | 563 | 6 |
| 5 | ರಾಣಿಬೆನ್ನೂರು | 208641 | 23921 | 598 | 6 |
| 6 | ಸವಣೂರು | 108322 | 12419 | 310 | 3 |
| 7 | ಶಿಗ್ಗಾಂವ್ | 122091 | 13998 | 350 | 3 |
| | ಒಟ್ಟು | 1140096 | 130711 | 3267 | 33 |
| 29 | ಉತ್ತರಕನ್ನಡ | | | | |
| 1 | ಅಂಕೋಲಾ | 75411 | 8646 | 216 | 2 |
| 2 | ಭಟ್ಕಳ | 107196 | 12290 | 307 | 3 |
| 3 | ಹಳಿಯಾಳ | 80350 | 9212 | 230 | 2 |
| 4 | ಹೊನ್ನಾವರ | 142507 | 16338 | 408 | 4 |
| 5 | ಕಾರವಾರ | 72852 | 8352 | 209 | 2 |
| 6 | ಕುಮಟಾ | 111327 | 12764 | 319 | 3 |
| 7 | ಮುಂಡಗೋಡ | 74565 | 8549 | 214 | 2 |
| 8 | ಸಿದ್ದಾಪುರ | 86820 | 9954 | 249 | 3 |
| 9 | ಸಿರಸಿ | 110215 | 12636 | 316 | 3 |
| 10 | ಸುಪಾ/ಜೋಯಿಡಾ | 48914 | 5608 | 140 | 2 |
| 11 | ಯೆಲ್ಲಾಪುರ | 55574 | 6372 | 159 | 2 |
| | ಒಟ್ಟು | 965731 | 110721 | 2767 | 28 |
| 30 | ಬೆಳಗಾಂ | | | | |
| 1 | ಅಥಣಿ | 420912 | 48257 | 1206 | 12 |
| 2 | ಬೈಲಹೊಂಗಲ | 313061 | 35892 | 897 | 9 |
| 3 | ಬೆಳಗಾಂ | 309101 | 35438 | 886 | 9 |
| 4 | ಚಿಕ್ಕೋಡಿ | 456495 | 52337 | 1308 | 13 |
| 5 | ಗೋಕಾಕ್ | 401006 | 45975 | 1149 | 12 |
| 6 | ಹುಕ್ಕೇರಿ | 304765 | 34941 | 874 | 9 |
| 7 | ಖಾನಾಪೂರ | 220345 | 25262 | 632 | 6 |
| 8 | ರಾಯಭಾಗ | 311828 | 35751 | 894 | 9 |
| 9 | ರಾಮದುರ್ಗ | 190763 | 21871 | 547 | 5 |
| 10 | ಸವದತ್ತಿ | 273538 | 31361 | 784 | 8 |
| | ಒಟ್ಟು | 3201814 | 367085 | 9177 | 92 |
| | ರಾಜ್ಯದ ಒಟ್ಟು | 34889033 | 4000000 | 100000 | 1000 |

<u>ಅನುಬಂಧ – 2</u>

## ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದ ಅನುಷ್ಠಾನ ವೇಳಾಪಟ್ಟಿ:

| ಕ್ರಸಂ. | ಚಟುವಟಿಕೆಗಳು | ನಿಗಧಿಪಡಿಸಿದ ಅವಧಿ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿಗಳು |
|---|---|---|---|
| 1 | ಗ್ರಾಮಗಳ ಆಯ್ಕೆ – ಸಂಬಂಧಪಟ್ಟ ಶಾಸಕರ ಶಿಫಾರಸ್ಸಿನೊಂದಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸುವುದು. | 20.07.2012 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 2 | ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವುದು. | 25.07.2012 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 3 | ಜಿಲ್ಲೆಗಳಿಂದ ಬಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿ ಸರ್ಕಾರದ ಅನುಮೋದನೆ ನೀಡುವುದು. | 10.08.2012 | ಸರ್ಕಾರದ ಮಟ್ಟದಲ್ಲಿ. |
| 4 | ಆಯ್ಕೆಯಾದ ಗ್ರಾಮಗಳ ಅಭಿವೃದ್ಧಿ ಯೋಜನೆಯನ್ನು ಸಾರ್ವಜನಿಕರ ಸಹಭಾಗಿತ್ವ ಹಾಗೂ ಸಮ್ಮುಖದಲ್ಲಿ ಮತ್ತು ಸ್ಥಳೀಯ ಶಾಸಕರ ಸಮಾಲೋಚನೆಯೊಂದಿಗೆ ತಯಾರಿಸುವುದು. | 30.08.2012 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 5 | ಸಿವಿಲ್ ಕಾಮಗಾರಿಗಳ ವಿನ್ಯಾಸ, ಅಂದಾಜು ಪಟ್ಟಿ ತಯಾರಿಸುವುದು. | 15.09.2012 | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 6 | ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ನೀಡುವುದು. | 25.09.2012 | ಸಕ್ಷಮ ತಾಂತ್ರಿಕ ಅಧಿಕಾರಿಗಳು. |
| 7 | ಅಭಿವೃದ್ಧಿ ಯೋಜನೆಗೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು. | 30.09.2012 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 8 | ಪ್ರತಿ ತಾಲ್ಲೂಕಿಗೆ 2 ಅನುಮೋದಿತ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸುವುದು. | 30.09.2012 | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 9 | ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು ಆರಂಭ ಮಾಡುವುದು. | 01.10.2012 ರಿಂದ | ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |
| 10 | ಮಾಹೆವಾರು ನಿಗಧಿತ ನಮೂನೆಯಲ್ಲಿ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. | ಪ್ರತಿ ಮಾಹೆ 5ನೇ ತಾರೀಖು | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. |
| 11 | ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನವನ್ನು ಮುಕ್ತಾಯಗೊಳಿಸುವುದು. | 31.03.2014ರ ಒಳಗಾಗಿ | ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು. |

— X —